ವಿ.ಹೇಮಂತಕುಮಾರ್, ಬೆಂಗಳೂರು

*ಕಾಂಗ್ರೆಸ್ ಚಿಹ್ನೆಯಾದ ಕೈ ಹೆಣ್ಣಿನದೋ, ಗಂಡಿನದೋ?*



ಎಲ್ಲರನ್ನೂ ತನಗೆ ಬೇಕಾದಂತೆ ಕುಣಿಸುವುದರಿಂದ – ಹೆಣ್ಣಿನದೇ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಹುಡುಗಿಯ ನಗು ಬದುಕಿದ್ದವರನ್ನು ಸಾಯಿಸುತ್ತೆ ಅಂತಾರಲ್ಲಾ, ಅದು ಹೇಗೆ?*

ಹುಡುಗೀರೂಂದ್ರೆ ಸಾಯೋವ್ರಿಗೆ ಮಾತ್ರ ಇದು ಅನ್ವಯಿಸುತ್ತೆ!

ಗೀತಾ ಬರ್ಲ, ಬೆಂಗಳೂರು

*ಇಲ್ಲೊಬ್ಬರು ದಿನವೂ, ತಗಲಾಕ್ಕೊಂಡೇ ನಾನು ತಗಲಾಕ್ಕೊಂಡೇ... ಎಂದು ಅಳುತ್ತಿರುತ್ತಾರಲ್ಲಾ...?*

ದಿನವೂ ಗೀತಾ, ಬರಲಾ? ಎಂದು ಹೊರಹೊರಡಲು ಯತ್ನಿಸಿದರೂ ನೀವು ಬಿಟ್ಟಿಲ್ಲವಂತಲ್ಲಾ... ಪಾಪ! ಆ ನಿಮ್ಮ ಪತಿಗೆ ನಮ್ಮ ಸಿಂಪಥಿ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ಗೋಡೆ ಗಡಿಯಾರಕ್ಕೂ, ನಮ್ಮ ಹೃದಯಕ್ಕೂ ಏನು ವ್ಯತ್ಯಾಸ?*



ಮೋಸ್ಟ್ ಬ್ಯೂಟಿಫುಲ್ ಹುಡುಗಿಯರನ್ನು ಕಂಡರೂ ಗಡಿಯಾರದ ವೇಗ ಹೆಚ್ಚುವುದಿಲ್ಲ!

ಪಿ.ಜೆ. ರಾಘವೇಂದ್ರ, ಮೈಸೂರು

*ದೇವೇಗೌಡರು ರಾಷ್ಟ್ರಪತಿಯಾಗಿ, ಕುಮಾರಣ್ಣ ರಾಜ್ಯಪಾಲರಾಗಿ, ರೇವಣ್ಣ ಮುಖ್ಯಮಂತ್ರಿಯಾದರೆ ನಮ್ಮ ರಾಜ್ಯ ರಾಮರಾಜ್ಯವಾಗಬಹುದೆ ರಾಮ್?*

ಹೇ ರಾಮ್!

ಎನ್. ಪ್ರಕಾಶ್, ದೇವನಹಳ್ಳಿ

*ಆದರ್ಶ ಶಿಕ್ಷಕನ ಅರ್ಹತೆಗಳೇನು?*

ಶಿಷ್ಯನ ವಿತ್ತವನ್ನು ಅಪಹರಿಸುವ ಬದಲು ಚಿತ್ತವನ್ನು ಅಪಹರಿಸುವುದು!

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

*ದೇವದಾಸನಿಗೂ, ಚರಣದಾಸನಿಗೂ ಏನು ವ್ಯತ್ಯಾಸ ಶಿವಾ?*

ಚರಣದಾಸನಿಗೆ ಕುಡಿಯದೆಯೇ ಕಿಕ್ ಹೊಡೆಯುತ್ತೆ!

ಆನಂದ್ ವಿ. ಶೇಟ್, ಒಸಲಕೊಪ್ಪ

*ಆಟೋಗಳ ಹಿಂದೆ ರಕ್ತ ತಾಗಿದ ಚಾಕು ಚಿತ್ರ ಹಾಕುವುದರಿಂದ ಮೈಲೇಜ್ ಜಾಸ್ತಿ ಕೊಡುತ್ತದೆಯೆ?*

ಊಹೂಂ; ಆದರೆ ಭೀತಿಯಿಂದ ಪ್ರಯಾಣಿಕ ಕೇಳಿದಷ್ಟು ಮೀಟರ್ ಚಾರ್ಜ್ ತೆಪ್ಪಗೆ ಕೊಡುತ್ತಾನೆ!

ಕಾಡನೂರು ರಾಮಶೇಷ, ಹುಲಿಮಂಗಲ

*ಲಂಚ ತೆಗೆದುಕೊಳ್ಳುವವನು ಲಂಚಕೋರ! ಕೊಡುವವನು?*

ಅಕ್ರಮವೀರ!

ಕಂಡಕ್ಟರ್ ರಾಜು, ಗುಬ್ಬಿ

*ಬಳ್ಳಾರಿಯ ರೆಡ್ಡಿಯ ಸಂಪತ್ತನ್ನು ಅನಂತಪದ್ಮನಾಭನ ಸಂಪತ್ತಿಗೆ ಹೋಲಿಸಬಹುದಾ?*

ಛಿ! ಗಂಧದ ಕೊರಡೆಲ್ಲಿ, ಗಠಾರದ ಕೊಳಕೆಲ್ಲಿ!

ಟಿ.ಆರ್. ರವೀಂದ್ರ, ಬೆಂಗಳೂರು

*ಇಂದಿನ ರಾಜಕಾರಣಿಗಳಿಗೂ, ಹಿಂದಿನ ರಾಕ್ಷಸರಿಗೂ ಇರುವ ಸಾಮ್ಯತೆ ಮತ್ತು ವ್ಯತ್ಯಾಸ ತಿಳಿಸಿ?*

ಇಬ್ಬರೂ ಬಕಾಸುರರೇ... ಆದರೆ ಯಾವುದೇ ರಾಕ್ಷಸ ತನ್ನ ದೇಶಕ್ಕೆ ತಾನೇ ಕನ್ನ ಹಾಕಿದ ದಾಖಲೆ ಇಲ್ಲ.

ಬಿ. ಚಂದ್ರೇಗೌಡ, ಬೆಂಗಳೂರು

*ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ ಎಂದರೇನು?*

ಹಾಲಪ್ಪ ಒಳ್ಳೆಯ ವ್ಯಕ್ತಿ ಎಂದು ನಿತ್ಯಾನಂದ ಸರ್ಟಿಫಿಕೇಟ್ ಕೊಡುವುದು!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಸದಾನಂದರ ಹಲ್ಲುಗಳ ಹೊಳಪು ಮತ್ತು ಶೋಭಕ್ಕನ ದಂತಪಂಕ್ತಿಯ ಬೆಳಕಿನಿಂದ ರಾಜ್ಯದ ಕರೆಂಟ್ ಪ್ರಾಬ್ಲಮ್ ಸಾಲ್ವ್ ಮಾಡಬಹುದಂತಲ್ಲ?*

ನಿಜ. ಆದರೆ ಎಡ್ಡಿಯ ಅಳುವಿನ ಮಳೆಗೆ ಸಿಕ್ಕಿ ಈ ಎರಡೂ ಟ್ರಾನ್ಸ್‌ಫಾರ್ಮರ್‌ಗಳು ಢಂ ಅಂದವಂತೆ!

ಮಹಾಲಿಂಗ ಎಂ. ಗೋರಬಾಳ, ಮಾಣಿಕವಾಡಿ

## ಬಹುಮಾನಿತ ಪ್ರಶ್ನೆ

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ರಾಮ ಲಕ್ಷ್ಮಣರಂತಿರುವವರು ಏಕಾಏಕಿ ವಾಲಿ ಸುಗ್ರೀವರಂತಾಗಿ ಬಿಡುವರಲ್ಲಾ...?*

ಸ್ಥಳಮಹಿಮೆ; ವಿಶಾಲ ಜಾಗವಿದ್ದರೆ ರಾಮ–ಲಕ್ಷ್ಮಣ, ಸ್ಥಳ ಕಿಷ್ಕಿಂಧೆಯಾದರೆ ವಾಲಿ–ಸುಗ್ರೀವ!

*ಯೌವನಕ್ಕೆ ಬಂದಾಗ ಹಂದಿಗಳೂ ಚಂದ ಎನ್ನುತ್ತಾರೇಕೆ?*

ಮೆಹಂದಿಗಳು ಚಂದ ಎಂದಿರಬೇಕು!

ನಾ.ರಾ.ಕೃ. ರೆಡ್ಡಿ, ನಾರಾಯಣಘಟ್ಟ

*ಜೂಜು ಆಡಿಯೇ ವನವಾಸಕ್ಕೆ ಹೋಗಬೇಕೆ?*

ಈಗ ಅದೂ ಆಗದು ಬಿಡಿ; ಫಾರೆಸ್ಟ್ ರೆಸಾರ್ಟ್‌ಗಳು ನಗರದ ಹೋಟೆಲ್‌ಗಳಿಗಿಂತಲೂ ದುಬಾರಿ.

ಆರ್. ಮಧುಸೂದನ, ಹಾಸನ

ಎಲ್.ಎಂ. ಮಾಧವಶಾಸ್ತ್ರಿ, ಶಿವಮೊಗ್ಗ

*ಆತ್ಮಹತ್ಯೆ ಮಾಡಿಕೊಳ್ಳುವವನು ಧೈರ್ಯಶಾಲಿಯೋ, ಹೇಡಿಯೋ?*



ಸತ್ತವನು ಅಪ್ಪನಾದರೆ ಹೇಡಿ, ಯಾರೋ ಆದರೆ ಧೈರ್ಯಶಾಲಿ!

*ನನ್ನ ಜಾತಕ ನೋಡಿದ ಜ್ಯೋತಿಷಿಗಳು ಮೂವರು ಹೆಂಡತಿಯರ ಜೊತೆ ಸುಖವಾದ ಸಂಸಾರ ಮಾಡ್ತೀರ ಅಂತಾರಲ್ಲಾ...?*

ಮೂವರು ಹೆಂಡಿರೇ? ಅಲ್ಲಿಗೆ ಇನ್ನೊಂದು ರಾಮಾಯಣ ಗ್ಯಾರಂಟಿ!

■ ರಾಮ್